**ಕರ್ನಾಟಕ ಸರ್ಕಾರ**

**ಆರ್ಥಿಕ ಇಲಾಖೆ**

**ಅಧಿಕೃತ ಜ್ಞಾಪನ ಪತ್ರ**

ಸಂ: ಎಫ್‌ಡಿ 01 ಬಿಪಿಇ 2022, ಬೆಂಗಳೂರು, ದಿನಾಂಕ:1ನೇ ಏಪ್ರಿಲ್, 2022

**2022-23 ನೇ ಸಾಲಿನ ಪೂರ್ಣ ವರ್ಷಕ್ಕಾಗಿ ವೆಚ್ಚ ಮಾಡಲು ಅನುಮತಿ**

* * *

01ನೇ ಏಪ್ರಿಲ್ 2022 ರಿಂದ 31ನೇ ಮಾರ್ಚ್ 2023ರ ವರೆಗಿನ ಅವಧಿಯ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ರಾಜ್ಯ ವಿಧಾನ ಮಂಡಲವು ಅನುಮೋದಿಸಿದೆ ಮತ್ತು ದಿನಾಂಕ 31ನೇ ಮಾರ್ಚ್ 2022 ರಂದು ಕರ್ನಾಟಕ ರಾಜ್ಯಪಾಲರ ಒಪ್ಪಿಗೆಯನ್ನು ಪಡೆದ ಈ ಧನವಿನಿಯೋಗ ವಿಧೇಯಕವನ್ನು ದಿನಾಂಕ 31ನೇ ಮಾರ್ಚ್, 2022 ರ ವಿಶೇಷ ಕರ್ನಾಟಕ ರಾಜ್ಯಪತ್ರದಲ್ಲಿ 2022 ರ ಕರ್ನಾಟಕ ಅಧಿನಿಯಮ ಸಂಖ್ಯೆ 16 ಎಂದು ಪ್ರಕಟಿಸಲಾಗಿದೆ. ಈ ಅಧಿಕೃತ ಜ್ಞಾಪನಕ್ಕೆ ಲಗತ್ತಿಸಿದ ಅನುಸೂಚಿಯಲ್ಲಿ ಸೂಚಿಸಿರುವಷ್ಟು ಅನುದಾನ ವಿನಿಯೋಗಗಳನ್ನು ಈ ಅಧಿನಿಯಮವು ಅಧಿಕೃತಗೊಳಿಸುತ್ತದೆ.

2. ಆದ್ದರಿಂದ, ಕಾಲಕಾಲಕ್ಕೆ ಜಾರಿಯಲ್ಲಿರುವ ಮಿತವ್ಯಯದ ಸೂಚನೆಗಳನ್ನು ಮತ್ತು ಸಾಮಾನ್ಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ಅನುಸೂಚಿಯಲ್ಲಿನ 5ನೇ ಕಾಲಂನಲ್ಲಿ ಸೂಚಿಸಿದ ಮೊತ್ತಕ್ಕಿಂತ ಮೀರದ ಮೊತ್ತವನ್ನು ದಿನಾಂಕ 1ನೇ ಏಪ್ರಿಲ್ 2022 ರಿಂದ 31ನೇ ಮಾರ್ಚ್ 2023 ರವರೆಗಿನ ಅವಧಿಗೆ, ಅನುಸೂಚಿಯ 2ನೇ ಅಂಕಣದಲ್ಲಿರುವ ಸೇವೆಗಳು ಮತ್ತು ಉದ್ದೇಶಕ್ಕಾಗಿ ಭರಿಸಲು "ಇಲಾಖಾ ಮುಖ್ಯಸ್ಥರು" ಮತ್ತು "ಅಂದಾಜು ಅಧಿಕಾರಿಗಳಿಗೆ" ಅಧಿಕಾರ ನೀಡಲಾಗಿದೆ. ಅನುಸೂಚಿಯ 5ನೇ ಕಾಲಂನಲ್ಲಿ ತಿಳಿಸಿರುವ ಮೊತ್ತದ ವಿವರಗಳನ್ನು ಆಯವ್ಯಯ ದಸ್ತಾವೇಜುಗಳೊಂದಿಗೆ ಒದಗಿಸಿದ "ಸಂಕ್ಷಿಪ್ತ ಅನುದಾನಗಳ ಅಭಿಯಾಚನೆ ಮತ್ತು ಪ್ರಭೃತ ವಿನಿಯೋಗ 2022-23" ರ ಭಾಗ-I ರಲ್ಲಿ ತಿಳಿಸಲಾಗಿದೆ. ಕೆಲವೊಂದು ಪ್ರಕರಣಗಳಲ್ಲಿ "ಬೇಡಿಕೆ"ಯು ಒಂದಕ್ಕಿಂತ ಹೆಚ್ಚಿನ ಮುಖ್ಯ ಲೆಕ್ಕಶೀರ್ಷಿಕೆ ಮತ್ತು ಮುಖ್ಯ ಲೆಕ್ಕಶೀರ್ಷಿಕೆಯ ಒಂದು ಭಾಗವನ್ನು ಒಳಗೊಂಡಿರುವುದನ್ನು ಗಮನಿಸಬಹುದು, ಯಾವುದೇ ಒಂದು ಮುಖ್ಯ ಲೆಕ್ಕಶೀರ್ಷಿಕೆಯು ಒಂದಕ್ಕಿಂತ ಹೆಚ್ಚಿನ "ಬೇಡಿಕೆ"ಗಳನ್ನು ಒಳಗೊಂಡಿದ್ದಲ್ಲಿ, ಆ ಮುಖ್ಯ ಲೆಕ್ಕಶೀರ್ಷಿಕೆಯ ಬೇಡಿಕೆವಾರು ವಿವರಗಳನ್ನು "ಸಂಕ್ಷಿಪ್ತ ಅನುದಾನಗಳ ಅಭಿಯಾಚನೆ ಮತ್ತು ಪ್ರಭೃತ ವಿನಿಯೋಗಗಳು 2022-23 ರ ಭಾಗ- II" ರಲ್ಲಿ ನಮೂದಿಸಲಾಗಿದೆ.

ಮು.ತಿ.ನೋ..

3. ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದ ಆಯವ್ಯಯ ಅನುದಾನಗಳು ಸಂಬಂಧಪಟ್ಟ ಅನುದಾನ ಅಭಿಯಾಚನೆಗಳಲ್ಲಿ ಸೇರಿರುತ್ತದೆ. ಅಭಿಯಾಚನೆಗಳಲ್ಲಿ ಸೂಚಿಸಿರುವ ಮೊತ್ತಕ್ಕಿಂತ ವೆಚ್ಚವು ಅಧಿಕವಾಗಿಲ್ಲವೆಂದು ಖಾತ್ರಿ ಮಾಡಿಕೊಳ್ಳುವ ಜವಾಬ್ದಾರಿಯು ಇಲಾಖಾ ಮುಖ್ಯಸ್ಥರದ್ದಾಗಿರುತ್ತದೆ. ಇವರು ಜಿಲ್ಲಾ ಪಂಚಾಯತ್‌ನ ಕ್ಷೇತ್ರ ಇಲಾಖೆಯಿಂದ ಮಾಸಿಕ ವರದಿಯನ್ನು ಪಡೆದುಕೊಂಡು ವೆಚ್ಚವನ್ನು ನಿಯಂತ್ರಿಸಬೇಕಾಗಿದೆ.

4. ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ವೆಚ್ಚವನ್ನು ನಿಯಂತ್ರಿಸಲು ಜವಾಬ್ದಾರರಾಗಿರುವ ಇತರ ಅಧಿಕಾರಿಗಳು ಯಾವುದೇ ಒಂದು ಬೇಡಿಕೆಯಡಿ ರಾಜಸ್ವ ಶೀರ್ಷಿಕೆಯಿಂದ ಬಂಡವಾಳ (ಸಾಲಗಳು ಸೇರಿ) ಶೀರ್ಷಿಕೆಗೆ ಹಾಗೂ ಬಂಡವಾಳ ಶೀರ್ಷಿಕೆಯಿಂದ ರಾಜಸ್ವ ಶೀರ್ಷಿಕೆಗೆ ಹಣವನ್ನು ಮರು ಹೊಂದಾಣಿಕೆ ಮಾಡಲಾಗುವುದಿಲ್ಲ ಎಂಬುದನ್ನು ಮನಗಾಣಬೇಕು. ಸರ್ಕಾರ ಮರುಹೊಂದಾಣಿಕೆಗೆ ಮಂಜೂರಾತಿ ನೀಡದ ಹೊರತು ಯಾವುದೇ ಘಟಕದಲ್ಲಿ ಉಳಿತಾಯದಿಂದ ಮರು ಹೊಂದಾಣಿಕೆಯನ್ನು ನಿರೀಕ್ಷಿಸಿ ಅಧಿಕ ವೆಚ್ಚವನ್ನು ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ. ವೆಚ್ಚವನ್ನು ಮಾಡಲು ಜವಾಬ್ದಾರರಾದ ಇಲಾಖಾ ಮುಖ್ಯಸ್ಥರು ಹಾಗೂ ಇತರರು ಆರ್ಥಿಕ ವರ್ಷದ ಕೊನೆಯಲ್ಲಿ ವೆಚ್ಚವು ಬೃಹತ್ ಪ್ರಮಾಣದಲ್ಲಾಗದೇ, ವರ್ಷದ ಎಲ್ಲಾ ತಿಂಗಳಲ್ಲೂ ಸಮನಾಗಿ ಹಂಚುವಂತೆ ನೋಡಿಕೊಳ್ಳತಕ್ಕದ್ದು ಹಾಗೂ ಆಯವ್ಯಯ ವ್ಯಪಗತವಾಗಬಾರದೆಂಬ ಉದ್ದೇಶದಿಂದ ವರ್ಷಾಂತ್ಯದಲ್ಲಿ ಬೃಹತ್ ಪ್ರಮಾಣದಲ್ಲಿ ವೆಚ್ಚ ಮಾಡುವುದನ್ನು ತಡೆಯುವುದು. ಹೊಸ ಸೇವೆ ನಿಯಮಗಳ ಆದೇಶ ಸಂಖ್ಯೆ ಎಫ್.ಡಿ 14 ಬಿಪಿಎ 2015, ದಿನಾಂಕ:06-08-2015 ನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು "ಹೊಸ ಸೇವೆಗಳ" ಬಗ್ಗೆ ಸಾದಿಲ್ವಾರು ನಿಧಿಯಿಂದ ಅಥವಾ ಪೂರಕ ಅಂದಾಜಿನ ಮೂಲಕ ಆರ್ಥಿಕ ಇಲಾಖೆಯು ಹಣ ಬಿಡುಗಡೆ ಮಾಡದ ಹೊರತು ಯಾವುದೇ ವೆಚ್ಚವನ್ನು ಮಾಡಬಾರದು.

5. ಕರ್ನಾಟಕ ಆರ್ಥಿಕ ಸಂಹಿತೆ / ಸಾದಿಲ್ವಾರು ವೆಚ್ಚದ ಕೈಪಿಡಿ / ಆಯವ್ಯಯ ಕೈಪಿಡಿ ನಿಯಮಗಳ ಅನ್ವಯ ಹಾಗೂ ಆದೇಶ ಸಂಖ್ಯೆ ಎಫ್.ಡಿ 03 ಟಿ.ಎಫ್.ಪಿ 2018, ದಿನಾಂಕ:14.05.2018 ಹಾಗೂ ಆರ್ಥಿಕ ಇಲಾಖೆಯು ಹೊರಡಿಸುವ ತ್ರೈಮಾಸಿಕ ಕಂತುಗಳ ಬಿಡುಗಡೆ ಅಧಿಕಾರದ ಆದೇಶಗಳನ್ವಯ ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸುತ್ತೋಲೆಗಳನ್ವಯ ಪರಿಶೀಲಿಸಿ ಅನುದಾನದ ಬಿಡುಗಡೆ / ವೆಚ್ಚಗಳನ್ನು ಮಾಡತಕ್ಕದ್ದು.

ಪು.ತಿ.ನೋ..

6. ಅಧಿಕೃತ ಜ್ಞಾಪನವನ್ನು ಆರ್ಥಿಕ ಇಲಾಖೆಯ ವೆಬ್ ತಾಣ www.finance.karnataka.gov.in ನಿಂದ ಪಡೆಯಬಹುದಾಗಿದೆ.

Ekroop Caur 4/4

(ಡಾ॥ ಏಕ್‌ರೂಪ್ ಕೌರ್)

ಸರ್ಕಾರದ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆ ಮತ್ತು ಸಂ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (A&E)/(Audit-I)/(Audit-II), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
3. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು ಮತ್ತು ಜಿಲ್ಲಾಧಿಕಾರಿಗಳು.
4. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
6. ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
7. ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ ಕಾರ್ಯದರ್ಶಿ / ಅಪರ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿಗಳು / ವಿಶೇಷಾಧಿಕಾರಿಗಳು / ಉಪ ಕಾರ್ಯದರ್ಶಿಗಳು / ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು.
8. ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.
9. ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.